ಶ್ರೀ ರಾಮಕೃಷ್ಣ ಹೆಗ್ಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

ಅ) ಜನಸಂಖ್ಯೆಯ ಅನುಗುಣವಾಗಿಯೇ ಪೊಲೀಸ್ ಸಿಬ್ಬಂದಿಯನ್ನು ನೇಮಿಸಬೇಕೆಂಬ ನಿಯಮ ಇಲ್ಲ. ಪೊಲೀಸ್ ಸಿಬ್ಬಂದಿಯ ನೇಮಕವನ್ನು ಕಾನೂನು ಮತ್ತು ಶಾಂತಿಪಾಲನೆಯ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತದೆ.

ಆ) ಕುಂದಾಪುರ ಆರಕ್ಷಕ ಠಾಣೆಯಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ಇದೆ:

ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್	—	೧
ಹೆಡ್ ಕಾನ್ಸ್‌ಟೆಬಲ್‌ರುಗಳು	—	೪
ಪೊಲೀಸ್ ಕಾನ್ಸ್‌ಟೆಬಲರುಗಳು	—	೨೨

ಇ) ಸಿರ್ಸಿ ಕಸಬ ಆರಕ್ಷಕ ಠಾಣೆಯಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ಇದೆ:

ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್	—	೧
ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್	—	೧
ಹೆಡ್ ಕಾನ್ಸ್‌ಟೆಬಲರುಗಳು	—	೯
ಪೊಲೀಸ್ ಕಾನ್ಸ್‌ಟೇಬಲರುಗಳು	—	೪೭

ಸಿರ್ಸಿ ಗ್ರಾಮಾಂತರ ಆರಕ್ಷಕ ಠಾಣೆ.

ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್	—	೨
ಹೆಡ್ ಕಾನ್ಸ್‌ಟೇಬಲರುಗಳು	—	೫
ಪೊಲೀಸ್ ಕಾನ್ಸ್‌ಟೇಬಲರುಗಳು	—	೨೩

ಹರಪನಹಳ್ಳಿ ತಾಲ್ಲೂಕಿನಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಕ ಮಾಡುವುದು

೬೮ (೫೫೦) ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಹಲವಾಗಲು, ಆರಸೀಕೆರೆ ಇನ್ನಿತರ ಹಳ್ಳಿಗಳಲ್ಲಿರುವ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ಎಷ್ಟು ದಿನಗಳೊಳಗಾಗಿ ಅಲ್ಲಿಗೆ ನಿಯೋಜಿಸಲಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಹೌದು

ಆ) ಸ್ನಾತಕೋತ್ತರ ಪದವಿ ಶಿಕ್ಷಣಕ್ಕೆ ನಿಯೋಜಿಸಿರುವ ಮಹಿಳಾ ವೈದ್ಯರುಗಳು ಫೆಬ್ರುವರಿ ತಿಂಗಳೊಳಗೆ ವಾಪಸ್ಸು ಬಂದ ನಂತರ ಆ ಹುದ್ದೆಗಳನ್ನು ಭರ್ತಿಮಾಡಲಾಗುವುದು.

ಬಾದಾಮಿ ತಾಲ್ಲೂಕಿನಲ್ಲಿ ಸಹಕಾರಿ ಆಯುರ್ವೇದ ಆಸ್ಪತ್ರೆ ಮಂಜೂರು ಮಾಡಿರುವುದು

೭೧ (೧೯) ಶ್ರೀ ಮಲ್ಲಿಖಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗುಳೇದಗುಡ್ಡ ಕ್ಷೇತ್ರದ ಬಾದಾಮಿ ತಾಲ್ಲೂಕಿನ ಕೆಲವಡಿ ಗ್ರಾಮದಲ್ಲಿ ಒಂದು ಸಹಕಾರಿ ಆಯುರ್ವೇದ ಆಸ್ಪತ್ರೆ ೧೯೮೦ರಲ್ಲಿ ಮಂಜೂರು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದರ ವಿವರಗಳೇನು?